ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ಡಿಟಿಇ/ಎನ್‌ಎಸ್‌ಎಸ್/18/ವಿ.ಮ.ಶಿ/2017-18

ನಿರ್ದೇಶಕರವರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ :11-02-2022

ಜ್ಞಾಪನ

ವಿಷಯ: ವಿಭಾಗಿಯ ಮಟ್ಟದ ವಿಶೇಷ ಶಿಬಿರ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಕ್ಕೆ ಸ್ವಯಂ ಸೇವಕ/ಸೇವಕಿಯರನ್ನು /ಕಾರ್ಯಕ್ರಮಾಧಿಕಾರಿಯನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: 1)ಪ್ರಾಚಾರ್ಯರ ಪತ್ರ ಸಂಖ್ಯೆ: ಸಪಾಸೊ/ಎನ್ ಎಸ್ ಎಸ್ 2021-22/310 ದಿನಾಂಕ:: 09-02-2022
2)ಸಂಖ್ಯೆ:ಡಿ.ಟಿ.ಇ/ರಾಸೇಯೋ/ಚಟುವಟಿಕೆ/02/2019-20 ದಿನಾಂಕ: 06.01.2022

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನಾ ಕೋಶವು ಸರ್ಕಾರಿ ಪಾಲಿಟೆಕ್ನಿಕ್, ಸೊರಬ ರಾ.ಸೇ.ಯೋ ಘಟಕದ ಸಹಕಾರ ಸಂಘಟನೆಯೊಡನೆ ಹೊಳೆಕೊಪ್ಪ ಗ್ರಾಮ ಸೊರಬ ತಾಲ್ಲೂಕು ಇಲ್ಲಿ ದಿನಾಂಕ: 28-02-2022 ರಿಂದ 06-03-2022 ರ ವರೆಗೆ 07 [ಏಳು] ದಿನಗಳ ಕಾಲ ಬೆಂಗಳೂರು-ಮೈಸೂರು ವಿಭಾಗಿಯಮಟ್ಟದ ಶಿಬಿರವನ್ನು ಅಯೋಜಿಸಿದೆ. ಸದರಿ ಶಿಬಿರಕ್ಕೆ ಈ ಕೆಳಗೆ ಸೂಚಿತ ಹಂಚಿಕೆಯ ಸ್ವಯಂ ಸೇವಕರು/ಸೇವಕಿಯರನ್ನು ಹಾಗೂ ಕಾರ್ಯಕ್ರಮಾಧಿಕಾರಿಯವರನ್ನು ಕಡ್ಡಾಯವಾಗಿ ನಿಯೋಜಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಪ್ರಾಚಾರ್ಯರಿಗೆ ಸೂಚಿಸಿದೆ.

| ಕ್ರ.ಸಂ | ಪಾಲಿಟೆಕ್ನಿಕ್ ಹೆಸರು | ನಿಯೋಜಿಸ ಬೇಕಾದ ಸ್ವಯಂ ಸೇವಕರ ಸಂಖ್ಯೆ | | |
|---|---|---|---|---|
| | | ಸ್ವಯಂ ಸೇವಕ | ಸ್ವಯಂ ಸೇವಕಿ | ಎನ್‌ಎಸ್‌ಎಸ್ ಅಧಿಕಾರಿ |
| ಬೆಂಗಳೂರು ವಿಭಾಗ | | | | |
| 1. | Govt. Polytechnic, Harihara | 05 | 05 | 01 |
| 2. | DRR(Govt.) Polytechnic, Davanagere | 05 | - | 01 |
| 3. | SJP (Govt. ) Polytechnic. Bengaluru | 05 | - | - |
| 4. | Govt Polytechnic, Ramanagar | 05 | - | - |
| 5. | K.V.T Polytechnic, Chickaballapura | 05 | - | - |
| 6. | Bapuji Polytechnic.Shabanur | 05 | - | - |
| 7. | S.T.J Polytechnic.Harapanahalli | 05 | - | - |
| 8. | Govt Polytechnic Turuvekere | 05 | - | 01 |
| 9. | Govt. Polytechnic Hosdurga | 05 | - | 01 |
| 10. | SJM Polytechnic, Chitradurga | 05 | - | - |
| ಮೈಸೂರು ವಿಭಾಗ | | | | |
| 11 | Govt. women's Residence Polytechnic Shivamogga | - | 10 | 01 |
| 12 | S.M Polytechnic, Sagar | 05 | 03 | 01 |
| 13 | Govt.Women'sPolytechnic, Shiralkoppa | - | 10 | 01 |
| 14 | Govt. VISSJ Polytechnic Badravathi | 06 | 04 | 01 |
| 15 | DACG Polytechnic Chickkamagaluru | 05 | 05 | 01 |
| 16 | C.P.C (Govt.) Poly technic. Mysuru | 03 | 02 | 01 |
| 17 | Smt. L.V Polytechnic Hassan | 05 | - | - |
| 18 | Govt.Polytechnic Holenarasipura | 05 | - | - |
| 19 | Govt. Polytechnic, Kushalnagar | 02 | - | - |
| 20 | Govt. Polytechnic, Sorab | 10 | 10 | - |
| | | 91 | 49 | 10 |

ಈ ಶಿಬಿರವು ನಾಯಕತ್ವ ಬೆಳವಣಿಗೆ ಶಿಬಿರವಾಗಿದ್ದು, ಶಿಬಿರಾರ್ಥಿಗಳನ್ನು ಆರಿಸುವಾಗ ಅವರು ರಾಸೇಯೋ ಸ್ವಯಂಸೇವಕರಾಗಿದ್ದು ಸಂಸ್ಥೆಯ ಮಟ್ಟದ ಶಿಬಿರದಲ್ಲಿ ಪಾಲ್ಗೊಂಡಿರಬೇಕು ಮತ್ತು ಪ್ರಥಮ ಅಥವಾ ದ್ವಿತೀಯ ವರ್ಷದ ಡಿಪ್ಲೋಮೊ ತರಗತಿಯಲ್ಲಿ ವ್ಯಾಸಂಗ ಮಾಡುವವರಿಗೆ ಆದ್ಯತೆ ನೀಡುವುದು, ಪಾಲ್ಗೊಳ್ಳುವ ಸ್ವಯಂ ಸೇವಕ/ಸ್ವಯಂ ಸೇವಕಿಯರು ಈ ಹಿಂದೆ ವಿಭಾಗಮಟ್ಟದ ಶಿಬಿರ ಅಥವಾ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಶಿಬಿರಗಳಲ್ಲಿ ಭಾಗವಹಿಸಿರಬಾರದು.

ನಿರ್ದೇಶಕರು

ಸೂಚನೆ:-

1) ಶಿಬಿರಾರ್ಥಿಗಳು ನಿಯೋಜನಾ ಪತ್ರದೊಂದಿಗೆ ಹಾಜರಿರುವುದು.
2) ಸಂಸ್ಥೆಯಿಂದ ಶಿಬಿರ ನಡೆಯುವ ಸ್ಥಳಕ್ಕೆ ಮತ್ತು ಹಿಂದಿರುಗಲು ಸಾಮಾನ್ಯ ಬಸ್ ರಿಯಾಯಿತಿ ದರವನ್ನು ಸಂಸ್ಥೆಗೆ (ಪಾಲಿಟೆಕ್ನಿಕ್‌ಗೆ) ಬಿಡುಗಡೆ ಮಾಡುವ ರಾಸೇಯೋ ನಿಧಿಯಿಂದ / ಸ್ವ-ಆರ್ಥಿಕ ಘಟಕಗಳು ರಾ.ಸೇ.ಯೋ ಶುಲ್ಕದಿಂದ ಪಡೆಯಬಹುದಾಗಿದೆ.
3) ರಾಸೇಯೋ ಅಧಿಕಾರಿಗಳು ಶಿಬಿರದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು. ಈ ಪತ್ರದೊಂದಿಗೆ ಶಿಬಿರಾರ್ಥಿಗಳಿಗೆ ಬೇಕಾಗುವ ಮಾಹಿತಿಗಳನ್ನೊಳಗೊಂಡ ಪ್ರತಿಗಳನ್ನು ಲಗತ್ತಿಸಿದೆ
4) ಶಿಬಿರಾರ್ಥಿಗಳು ಈ ಪತ್ರದೊಂದಿಗೆ ಲಗತ್ತಿಸಿರುವ Indemnity ಅರ್ಜಿಯನ್ನು ಭರ್ತಿಮಾಡಿ ತರುವುದು.
5) ಶಿಬಿರಾರ್ಥಿಗಳು ದಿನಾಂಕ: 27-02-2022 ರಂದು ಸಂಜೆ ರಿಂದ 28-02-2022 ರ ಬೆಳಗ್ಗೆ 10-00 ಗಂಟೆ ಒಳಗೆ ಶಿಬಿರಕ್ಕೆ ವರದಿ ಮಾಡಿಕೊಳ್ಳುವುದು.
6) ಶಿಬಿರದಲ್ಲಿ ಭಾಗವಹಿಸುವವರು ಮುಂಚಿತವಾಗಿಯೇ ಸರ್ಕಾರಿ ಪಾಲಿಟೆಕ್ನಿಕ್, ಸೊರಬ ಪ್ರಾಚಾರ್ಯರಿಗೆ ಪತ್ರವನ್ನು (ಸ್ವಯಂಸೇವಕರ ಪಟ್ಟಿಯ ಜೊತೆಗೆ) ಬರೆದು ಕಳುಹಿಸ ತಕ್ಕದ್ದು.
7) ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬೇಕಾದ ಸಲಕರಣೆಗಳನ್ನು ತಾವೇ ತರುವಂತೆ ಸ್ವಯಂಸೇವಕರಿಗೆ ತಿಳಿಸುವುದು.

ದೂರವಾಣಿ ಸಂಖ್ಯೆ:

| | |
|---|---|
| 01 | ಪ್ರಾಚಾರ್ಯರು :9482587139 |
| 02 | ಕಾರ್ಯಕ್ರಮಾಧಿಕಾರಿ: 9148837571 |
| 03 | ಕಛೇರಿ ದೂರವಾಣಿ ಸಂಖ್ಯೆ 08184-272539 |

ಇವರಿಗೆ:-ಸಂಬಂಧ ಪಟ್ಟ ಪಾಲಿಟೆಕ್ನಿಕ್ ಪ್ರಾಚಾರ್ಯರುಗಳಿಗೆ -ಸೂಕ್ತ ಕ್ರಮಕ್ಕಾಗಿ

ಪ್ರತಿ: 1) ರಾಜ್ಯ ಎನ್ ಎಸ್ ಎಸ್ ಅಧಿಕಾರಿಗಳು,ರಾಸೇ.ಯೋ ಕೋಶ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು-01
2) ನಿರ್ದೇಶಕರು ಪ್ರಾಂತೀಯ ಕೇಂದ್ರ # 57/190 ಆರ್.ವಿ ರೋಡ್, ಬಸವನಗುಡಿ ಬೆಂಗಳೂರು-04
3) ನಿರ್ದೇಶಕರ ಆಪ್ತ ಶಾಖೆ
4) ಇ-ಆಡಳಿತ ವಿಭಾಗಕ್ಕೆ ವೆಬ್ ಸೈಟ್ ನಲ್ಲಿ ಪ್ರಕಟಿಸಲು
5) ಕಛೇರಿ ಕಡತಕ್ಕೆ

# FORM OF INDEMNITY –A SPECIMEN

In consideration of my being nominated at my request to undergo all types of training and also participating in my camp/ course training activities in/outsides NSS and traveling. I undertaken and agree that neither I nor my executor/administrator will take any claim against the Government of India or against any officer of NSS /Principal/Programme officer/ Programme Co-ordinator/State Liaison Officer/Youth Officer/Assistant Programme Adviser/Deputy Programme Adviser in respect of any loss or injury to the property or person (including Injury resulting in death ) Which may suffer while inconsequence of my being in training /participating in any camp /course/adventure training activities in/ outside NSS and traveling and I understand that no Compensation will be paid by the Government of India or any Officer as motioned against any such loss of injury (including injury resulting in death) and I agree so as to bind myself, executors and administrators to indemnity to the Government of India, any NSS official any person in service of Government of India ,against any claim which may be made any third party against them or any of them arising out of any act of default on any part during if in connection of said training camp/course/NSS Pre-R.D or RD Camp/NSS RD parade/Adventure training and journey by road / rail / sea / river and flight.

Signature of the applicant

Signature of the Programme officer
Signed by the applicant.
In my presence:

Witness NO,1.Signature ---------------------

Name ---------------------

Address ---------------------

Witness No.2.Signature ---------------------

Name ---------------------

Address ---------------------

Note: One of the witness must be the parent /Guardian of the applicant.

ಶಿಬಿರಾರ್ಥಿಗಳಿಗೆ ಸೂಚನೆ ಹಾಗೂ ಶಿಬಿರದ ನಿಯಮಗಳು-

1) ಶಿಬಿರಾರ್ಥಿಗಳು ಬರುವಾಗ ಶಿಬಿರ ಜೀವನಕ್ಕೆ ಅಗತ್ಯವಾದ ವಸ್ತುಗಳನ್ನು (Light Bedding.(2) 3or 4 pairs of dress including work dress. (3) plate, tumbler mug.(4) caver shoes.(5) Torch (6) personal toilet requirements (7) medic in for common ailments (8) skull cap ) ತರಬೇಕು ಇವುಗಳಲ್ಲಿ ಯಾವುದೇ ಇಲ್ಲದಿದ್ದರೂ ತೊಂದರೆಯನ್ನು ಅನುಭವಿಸಬೇಕಾಗುತ್ತದೆ, ಬೆಲೆ ಬಾಳುವ ವಸ್ತುಗಳನ್ನಾಗಲಿ ಹೆಚ್ಚಿನ ನಗದು ಹಣವನ್ನಾಗಲಿ ಶಿಬಿರಕ್ಕೆ ತರಬಾರದು. ಹಾಗೇನಾದರು ತಂದು ಕಳೆದು ಹೋದಲ್ಲಿ ವ್ಯವಸ್ಥಾಪಕರು ಜವಾಬ್ದಾರರಲ್ಲ.
2) ಶಿಬಿರಾರ್ಥಿಗಳು ಶಿಬಿರದ ನಿಯಮಗಳಿಗನುಸಾರವಾಗಿ ಶಿಬಿರದ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುವುದಾಗಿ ಒಪ್ಪಿಗೆ ಪತ್ರ ನೀಡಬೇಕು
3) ಶಿಬಿರದಲ್ಲಿ ಸರಳವಾದ ಊಟ ಮತ್ತು ತಣ್ಣೀರಿನ ಸ್ನಾನದ ಸೌಕರ್ಯ ಮಾತ್ರವಿರುತ್ತದೆ.
4) ಶಿಬಿರದ ಅವಧಿಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಶಿಬಿರದಲ್ಲಿಯೇ ಇರಬೇಕು. ಶಿಬಿರಾಧಿಕಾರಿಗಳ ಅನುಮತಿ ಇಲ್ಲದೇ ಶಿಬಿರದ ಆವರಣವನ್ನು ಬಿಡುವಂತಿಲ್ಲ.
5) ಶಿಬಿರಾರ್ಥಿಗಳ ಸ್ನೇಹಿತರಾಗಲಿ ಬಂಧುಗಳಗಲಿ, ಶಿಬಿರಾಧಿಕಾರಿಗಳ ಅನುಮತಿ ಇಲ್ಲದೇ ಶಿಬಿರದ ಆವರಣವನ್ನು ಪ್ರವೇಶಿಸಬಾರದು.
6) ಶಿಬಿರದ ವ್ಯವಸ್ಥೆ ಹಾಗೂ ನಿರ್ವಹಣೆಯಲ್ಲಿ ಸಕ್ರಿಯವಾಗಿ ಸಹಕರಿಸಬೇಕು, ಉಂಟಾಗುಬಹುದಾದ ಸಣ್ಣ ಪುಟ್ಟ ಕುಂದುಕೊರತೆಗಳನ್ನು ಸಹಿಸಿಕೊಂಡು ಶಿಬಿರದ ಚಟುವಟಿಕೆಗಳು ಸುಗಮವಾಗಿ ನಡೆಯುವಂತೆ ಅನುವುಮಾಡಿಕೊಡಬೇಕು.
7) ನದಿಗಳಲ್ಲಿ, ಕೆರೆಯಲ್ಲಿ ಈಜಾಡುವುದನ್ನು ನಿಷೇಧಿಸಿದೆ, ಆಕಸ್ಮಿಕವಾಗಿ ಆಗುವ ತೊಂದರೆಗಳಿಗೆ ಇಲಾಖೆ ಜವಾಬ್ದಾರರಲ್ಲ.
8) ಕಾರ್ಯಕ್ರಮದ ಪಟ್ಟಿಯ ಅನುಸಾರ ಕಾಲಕ್ಕೆ ಸರಿಯಾಗಿ ಎಲ್ಲಾ ಚಟುವಟಿಕೆಗಳಲ್ಲಿಯು ಸಕ್ರಿಯವಗಿ ಭಾಗವಹಿಸುವುದು ಪ್ರತಿಯೊಬ್ಬ ಶಿಬಿರಾರ್ಥಿಯ ಕರ್ತವ್ಯ.
9) ಶಿಬಿರದ ಆವರಣವನ್ನು ಶುಚಿಯಾಗಿ ಇಡಲು ಸಹಕರಿಸಬೇಕು.
10) ಶಿಬಿರದ ಧ್ಯೇಯೋದ್ದೇಶಗಳನ್ನು ಸಾರ್ಥಕಗೊಳಿಸಲು, ಸಂಸ್ಥೆಯ ಹಾಗೂ ಇಲಾಖೆಗೆ ಗೌರವಗಳನ್ನು ಕಾಪಾಡಲು ಪ್ರತಿಯೊಬ್ಬ ಶಿಬಿರಾರ್ಥಿಯು ಶಕ್ತಿ ಮೀರಿ ಪ್ರಯತ್ನಿಸಬೇಕು.
11) ಈ ಮೇಲಿನ ನಿಯಮಗಳಲ್ಲದೇ ಶಿಬಿರದ ನಿರ್ದೇಶಕರು ಕಾಲ ಕಾಲಕ್ಕೆ ವಿಧಿಸುವ ಯಾವುದೇ ನಿಯಮಗಳನ್ನು ಎಲ್ಲಾ ಶಿಬಿರಾರ್ಥಿಗಳು ಪಾಲಿಸಬೇಕು.
12) ಶಿಬಿರದ ನಿಯಮಗಳಿಗೆ ವಿರೋಧವಾಗಿ ನಡೆದವರನ್ನು ತಕ್ಷಣವೇ ಶಿಬಿರದಿಂದ ಹೊರಹಾಕುವ ಅಧಿಕಾರವನ್ನು ಶಿಬಿರದ ವ್ಯವಸ್ಥಾಪಕರು ಹೊಂದಿದ್ದಾರೆ.
13) ಬರುವಾಗ ಪ್ರಾಂಶುಪಾಲರು ಅಥವಾ ಸಂಸ್ಥೆಯ ರಾಸೇಯೋ ಅಧಿಕಾರಿಯವರಿಂದ ನಿಮ್ಮನ್ನು ನಿಯೋಜಿಸಿರುವ ಬಗ್ಗೆ ಪತ್ರತರಬೇಕು. ಇಲ್ಲವಾದಲ್ಲಿ ಶಿಬಿರದಲ್ಲಿ ಭಾಗವಹಿಸಲು ಸಾಧ್ಯವಿಲ್ಲ.

ದಿನಾಂಕ:28-02-2022 ರಿಂದ 06-03-2022ರ ಕಾರ್ಯಕ್ರಮಗಳ ಮಾದರಿ ವೇಳಾಪಟ್ಟಿ

| | | |
|---|---|---|
| 27-02-2022 ಸಂಜೆ 5:00 ರಿಂದ<br>28-02-2022 ಬೆಳ್ಳಗೆ 10:00 ಗಂಟೆ ವರೆಗೆ | : | ಇಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಸೊರಬ ಇಲ್ಲಿ ವರದಿ ಮಾಡಿಕೊಳ್ಳುವುದು |
| 7:00 ರಿಂದ ಸಂಜೆ 8:00 ರವರೆಗೆ | : | ತಂಗುವ ವ್ಯವಸ್ಥೆ |
| 8:00 ರಿಂದ ರಾತ್ರಿ 9:00 ರವರೆಗೆ<br>9:00 ರಿಂದ ಸಂಜೆ10:00 ರವರೆಗೆ | :<br>: | ರಾತ್ರಿ ಊಟ<br>ಶಿಬಿರದ ಬಗೆಗೆ ಸೂಚನೆಗಳು |
| 6:30 ರಿಂದ ಸಂಜೆ 7:15 ರವರೆಗೆ | : | ದೈನಂದಿನ ಕಾರ್ಯಕ್ರಮಗಳು |
| 6:30 ರಿಂದ ಬೆಳಗ್ಗೆ 7:15 ರವರೆಗೆ | : | ಧ್ವಜಾರೋಹಣ, ಪ್ರಾರ್ಥನೆ, ಲಘುವ್ಯಾಯಮ |
| 7:15 ರಿಂದ ಬೆಳಗ್ಗೆ 8:00 ರವರೆಗೆ | : | ಉಪಹಾರ |
| 8:00ರಿಂದ ಬೆಳ್ಳಗೆ 12:30 ರವರೆಗೆ | : | ಶ್ರಮಧಾನ |
| 12:30ರಿಂದ ಮದ್ಯಾಹ್ನ 1:30 ರವರೆಗೆ 1:30<br>ರಿಂದ ಮದ್ಯಾಹ್ನ 2:30 ರವರೆಗೆ | :<br>: | ಸ್ನಾನ ಇತ್ಯಾದಿ<br>ಊಟ |
| 2:30 ರಿಂದ ಮದ್ಯಾಹ್ನ 3:00 ರವರೆಗೆ | : | ವಿಶ್ರಾಂತಿ |
| 3:00 ರಿಂದ ಸಂಜೆ 5:00 ರವರೆಗೆ | : | ಸ್ಪರ್ಧೆಗಳು ಮತ್ತು ಕ್ರೀಡಾ ಚಟುವಟಿಕೆಗಳು |
| 5:00 ರಿಂದ ಸಂಜೆ 5:15 ರವರೆಗೆ | : | ಟೀ |
| 5:15 ರಿಂದ ಸಂಜೆ 7:00 ರವರೆಗೆ<br>7:00 ರಿಂದ ಸಂಜೆ 7:15 ರವರೆಗೆ | :<br>: | ಉಪನ್ಯಾಸ ಮತ್ತು ಚರ್ಚೆ<br>ಪ್ರಾರ್ಥನೆ |
| 7:15 ರಿಂದ ಸಂಜೆ 9:00 ರವರೆಗೆ | : | ಸಾಂಸ್ಕೃತಿಕ ಕಾರ್ಯಕ್ರಮಗಳು |
| 9:00 ರಿಂದ ರಾತ್ರಿ 10:00 ರವರಗೆ | : | ಊಟ |
| 10:00 ರಿಂದ ರಾತ್ರಿ 10:30 ರವರೆಗೆ | : | ದಿನಚರಿ ಬರೆಯುವುದು |
| 10:30 | : | ದೀಪ ನಂದಿಸುವುದು |

ಪ್ರತಿ ದಿನದ ವಿವರವಾದ ಕಾರ್ಯಕ್ರಮದ ಪಟ್ಟಿಯನ್ನು ಶಿಬಿರದಲ್ಲಿ ನೀಡಲಾಗುವುದು